ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಆರೋಗ್ಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ  ದಿನಾಂಕ : DATE 5/11/20

# ಸಹಕಾರ ಸಂಸ್ಥೆಗಳಲ್ಲಿ ಜನೌಷಧ ಮಾರಾಟ

5/11/20

## ಮೊದಲ ಹಂತದಲ್ಲಿ 500ಕ್ಕೂ ಹೆಚ್ಚು ಕಡೆ ಪ್ರಧಾನ ಮಂತ್ರಿ ಜನೌಷಧ ಕೇಂದ್ರ ಸ್ಥಾಪನೆ

ಬೆಂಗಳೂರು: ರಾಜ್ಯದ ಸಹಕಾರ ಸಂಸ್ಥೆಗಳಲ್ಲಿ ಜನೌಷಧ ಮಾರಾಟಕ್ಕೆ ನಿರ್ಧರಿಸಲಾಗಿದ್ದು ಮೊದಲ ಹಂತದಲ್ಲಿ 500ಕ್ಕೂ ಹೆಚ್ಚು ಸಹಕಾರ ಸಂಸ್ಥೆಗಳಲ್ಲಿ 'ಪ್ರಧಾನಮಂತ್ರಿ ಜನೌಷಧ ಕೇಂದ್ರ' ತೆರೆಯಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಅಧ್ಯಕ್ಷ ಡಾ.ಎಂ.ಎನ್ ರಾಜೇಂದ್ರಕುಮಾರ್ ತಿಳಿಸಿದರು.



ನಗರದ ಮಹಾಮಂಡಳ ಮುಖ್ಯ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಯೋಜನೆಯನ್ನು ರೈತ ಸಮುದಾಯ, ಗ್ರಾಮೀಣ ಹಾಗೂ ನಗರ ಭಾಗಗಳಿಗೆ ತಲುಪಿಸುವ ನಿಟ್ಟಿನಲ್ಲಿ ಮಹಾಮಂಡಳವು ಸಹಕಾರ ಸಂಸ್ಥೆಗಳಲ್ಲಿ ಜನೌಷಧ ಮಾರಾಟಕ್ಕೆ ಮುಂದಾಗಿದೆ ಎಂದರು.

ಮಹಾಮಂಡಳವು ಜನೌಷಧದಿಂದ ಭಾರೀ ಪ್ರಮಾಣದಲ್ಲಿ ಲಾಭಗಳಿಸುವ ಉದ್ದೇಶವೂ ಹೊಂದಿಲ್ಲ, ಇತರೆ ಉದ್ಯಮಗಳು ಇರುವುದರಿಂದ ಈ ಯೋಜನೆಯನ್ನು ಜನ ಸಾಮಾನ್ಯರಿಗೆ ತಲುಪಿಸಲಾಗುತ್ತದೆ ಎಂದರು.

**ಯೂರಿಯಾ ಉತ್ಪಾದನಾ ಘಟಕ :** ಮಳೆಗಾಲ ಬಂದರೆ ರೈತರಿಗೆ ಯೂರಿಯಾ ಸಮಸ್ಯೆ ತಲೆದೋರುತ್ತಿದೆ. ಇದಕ್ಕೆ ಪರಿಹಾರವಾಗಿ ಎಲ್ಲಾ ಸಹಕಾರ ಸಂಸ್ಥೆಗಳನ್ನು ಒಗ್ಗೂಡಿಸಿಕೊಂಡು ದಾವಣಗೆರೆ ಜಿಲ್ಲೆಯ ಹರಿಹರ ಬಳಿ 12.50 ಲಕ್ಷ ಮೆ.ಟನ್ ಸಾಮರ್ಥ್ಯದ 'ಗ್ರೀನ್ ಫೀಲ್ಡ್ ಯೂರಿಯಾ' ಉತ್ಪಾದನಾ ಘಟಕವನ್ನು ಪ್ರಾರಂಭಿಸಲು ಮುಂದಾಗಿರುವುದಾಗಿ ತಿಳಿಸಿದರು.

ನಾಳೆ ಚಾಲನೆ: ಮಹಾಮಂಡಳವು ಹುಬ್ಬಳ್ಳಿಯಲ್ಲಿ ನಿರ್ಮಿಸಿರುವ ಜನೌಷಧಗಳ ವಿತರಣಾ ಕೇಂದ್ರವನ್ನು ನಾಳೆ (ನ.6) ಕೇಂದ್ರ ಸಚಿವ ಡಿ.ವಿ.ಸದಾನಂದ ಗೌಡ ಅವರು ಬೆಂಗಳೂರಿನ ಮಹಾಮಂಡಳ ಕಚೇರಿ ಯಲ್ಲಿ ನಡೆಯುವ ವರ್ಚುವಲ್ ಕಾರ್ಯಕ್ರಮ ದ ಮೂಲಕ ಉದ್ಘಾಟನೆ ಮಾಡಲಿದ್ದಾರೆ.

### 34 ಕೋಟಿ ರೂ. ಲಾಭ

ರಸಗೊಬ್ಬರ ವಿತರಣೆ ಮತ್ತು ಕೃಷಿ ಉತ್ಪನ್ನ ಖರೀದಿಸುವ ಮಹಾಮಂಡಳವು 2019-20ನೇ ಸಾಲಿನಲ್ಲಿ 2584.8 ಕೋಟಿ ರೂ. ವಹಿವಾಟು ನಡೆಸಿದ್ದು, 34.22 ಕೋಟಿ ರೂ. ಲಾಭಗಳಿಸಿದೆ. ಕಳೆದ ವರ್ಷ ರೈತರಿಂದ 2,312 ಕೋಟಿ ರೂ. ಮೌಲ್ಯದ 41.5 ಲಕ್ಷ ಕ್ವಿಂಟಾಲ್ ಕೃಷಿ ಉತ್ಪನ್ನ ಖರೀದಿಸಿದೆ. ಪ್ರಸಕ್ತ ಸಾಲಿನಲ್ಲಿ ಅಕ್ಟೋಬರ್ ಅಂತ್ಯಕ್ಕೆ 360 ಕೋಟಿ ರೂ.ನ 2.89 ಲಕ್ಷ ಮೆಟ್ರಿಕ್ ಟನ್ ರಸಗೊಬ್ಬರ ವ್ಯವಹಾರ ನಡೆಸಿದೆ. ಸದ್ಯ ಮಹಾಮಂಡಳದ 40 ಶಾಖೆಗಳು ರಾಜ್ಯದ ವಿವಿಧೆಡೆ ಕಾರ್ಯ ಚಟುವಟಿಕೆ ಆರಂಭಿಸಿವೆ. ಹೊಸದಾಗಿ 50 ಶಾಖೆಗಳನ್ನು ತೆರೆಯಲು ಚಿಂತನೆ ನಡೆಸಿದ್ದು, ಇದಕ್ಕಾಗಿ ಜಾಗ ಗುರುತಿಸಲಾಗಿದೆ. ಈ ಪೈಕಿ 10 ಕಡೆಗಳಲ್ಲಿ ಮಳಿಗೆಗಳು ಕಾರ್ಯಾರಂಭಿಸಿವೆ. ಜತೆಗೆ ಹುಬ್ಬಳ್ಳಿಯಲ್ಲಿ ಲಾಜಿಸ್ಟಿಕ್ ವೇರ್‌ಹೌಸ್ ಮತ್ತು ವಾಣಿಜ್ಯ ಕಟ್ಟಡ ನಿರ್ಮಿಸಲು ಉದ್ದೇಶಿಸಿದೆ ಎಂದು ಡಾ.ಎಂ.ಎನ್ ರಾಜೇಂದ್ರಕುಮಾರ್ ತಿಳಿಸಿದ್ದಾರೆ.